ಶ್ರೀ ಬಿ. ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು) :

ಅ) 2000-01ನೇ ಸಾಲಿಗೆ ರೂ. 900.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಇದರಲ್ಲಿ ಆಡಳಿತಾತ್ಮಕ ವೆಚ್ಚಕ್ಕಾಗಿ ರೂ. 30.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಆ) ರೂ. 75.00 ಲಕ್ಷ (ಅಂದಾಜು ವಾರ್ಷಿಕ ವೆಚ್ಚ)
ರೂ. 45.00 ಲಕ್ಷ (ಸರ್ಕಾರದ ವಿವೇಚನಾ ನಿಧಿ)
ರೂ. 45.00 ಲಕ್ಷ (ಅಧ್ಯಕ್ಷರ ವಿವೇಚನಾ ನಿಧಿ)

ಇ) ಪ್ರತಿ ವಿಧಾನ ಸಭಾಕ್ಷೇತ್ರಕ್ಕೆ ರೂ. 9.60 ಲಕ್ಷಗಳು ಈ ಕೆಳಕಂಡಂತೆ ಲಭ್ಯವಾಗುತ್ತದೆ. (ಶೇ. 60ರಡಿಯಲ್ಲಿ ರೂ. 5.80 ಲಕ್ಷಗಳು ಮತ್ತು ಶೇ. 40 ರಡಿಯಲ್ಲಿ ರೂ. 3.80 ಲಕ್ಷಗಳು)

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ವ್ಯಾಪ್ತಿ

3152 - ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಮೀನುಗಾರಿಕೆ ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯು ಅಸ್ತಿತ್ವದಲ್ಲಿದೆಯೇ ಇದರ ಮೂಲ ಉದ್ದೇಶಗಳು ಮತ್ತು ಈ ಮಂಡಳಿಯ ವ್ಯಾಪ್ತಿಗೆ ಬರುವ ಜಿಲ್ಲೆಗಳು ಯಾವುವು?

ಆ) ಇದರ ಕೇಂದ್ರ ಕಛೇರಿ ಅಲ್ಲದೆ ಈ ಕಛೇರಿಯನ್ನು ಬೆಂಗಳೂರಿಗೆ ಸ್ಥಳಾಂತರಿಸುವ ಕುರಿತು ಸರ್ಕಾರದ ನಿಲುವೇನು?

ಇ) ಈ ಮಂಡಳಿಗೆ ಆರ್ಥಿಕ ಸಹಾಯವನ್ನು ನಬಾರ್ಡ್‌ನಿಂದ ಪಡೆಯಲಾಗಿದೆಯೇ ಇದರ ಕ್ರೋಢಿಕೃತ ಕ್ರಿಯಾ ಯೋಜನೆ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದೆಯೇ, ಅನುಮೋದನೆ ನೀಡಲಾಗಿದೆಯೇ?

ಈ) ಕ್ರಿಯಾ ಯೋಜನೆಯ ಸಂಪೂರ್ಣ ವಿವರಗಳನ್ನು ನೀಡುವುದು?

ಶ್ರೀ ಬಿ. ರಮಾನಾಥ್ ರೈ (ಮೀನುಗಾರಿಕೆ ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು) :

ಅ) ಇದೆ. ಈ ಮಂಡಳಿಯ ಉದ್ದೇಶಗಳೇನೆಂದರೆ ಶೇ. 60ರಡಿಯಲ್ಲಿ ಜಲಮೂಲಗಳ ಅಭಿವೃದ್ಧಿ ಮತ್ತು ಸಂರಕ್ಷಣೆ, ಭೂಸಾರ ಮತ್ತು ಜಲಸಂರಕ್ಷಣೆ ಅರಣ್ಯಾಭಿವೃದ್ಧಿಗೆ ಉತ್ತೇಜನ ನೀಡುವುದು, ತೋಟಗಾರಿಕೆಗೆ ಪ್ರೋತ್ಸಾಹ ನೀಡುವುದು ಕೃಷಿ ಮತ್ತು ತತ್ಸಂಬಂಧಿ ವಲಯಗಳಲ್ಲಿನ ಚಟುವಟಿಕೆಗಳನ್ನು ಉತ್ತೇಜಿಸುವುದು ಮತ್ತು ನೆರವು ನೀಡುವುದು, ಪಶು ಸಂಗೋಪನೆಗೆ ಉತ್ತೇಜನ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದು.

ಶೇ. 40 ರಡಿಯಲ್ಲಿ ರಸ್ತೆ, ಸೇತುವೆ ಮತ್ತು ಕಟ್ಟಡಗಳ ನಿರ್ಮಾಣಗಳಿಗೆ ಪ್ರೋತ್ಸಾಹಿಸುವುದು.

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ 12 ಜಿಲ್ಲೆಗಳು ಒಳಗೊಂಡಿವೆ. ಅವು ಈ ಕೆಳಗಿನಂತಿವೆ.

1. ಬೆಂಗಳೂರು (ಗ್ರಾ) 2. ತುಮಕೂರು
3. ಕೋಲಾರ 4. ಹಾಸನ
5. ಚಿತ್ರದುರ್ಗ 6. ದಾವಣಗೆರೆ
7. ಧಾರವಾಡ 8. ಗದಗ
9. ಹಾವೇರಿ 10. ಬೆಳಗಾಂ
11. ಬಿಜಾಪುರ 12. ಬಾಗಲಕೋಟೆ

ಅ) ಕೇಂದ್ರ ಕಛೇರಿ ಚಿತ್ರದುರ್ಗದಲ್ಲಿದೆ. ಈ ಕಛೇರಿಯನ್ನು ಸ್ಥಳಾಂತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ.

ಇ) ಇಲ್ಲ. ಆದರೆ ನಬಾರ್ಡ್‌ನಿಂದ ರೂ. 6835.29 ಲಕ್ಷಗಳ ಆರ್ಥಿಕ ನೆರವು ಪಡೆಯಲು ಪರಿಶೀಲಿಸಲಾಗುತ್ತಿದ್ದು ಸದ್ಯಕ್ಕೆ ಈ ಪ್ರಸ್ತಾವನೆಯು ಇದಕ್ಕಾಗಿ ರಚಿಸಲಾಗಿರುವ ಸಚಿವ ಸಂಪುಟದ ಉಪ ಸಮಿತಿಯ ಮುಂದೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಅನುಬಂಧ - 1 ರಲ್ಲಿ ನೀಡಲಾಗಿದೆ.

ANNEXURE - 1

Statement Showing the no. of works proposed under NABARD action plan districtwise abstract

(Rs. in Lakhs)

Sl. No.	Name of the District	No.of Constituency	60% works proposed				40% works proposed				Grand Total			
			Watershed Development works.		Construction Tanks Bhandars LIS		Modernisation M.I. Tanks		Total		Roads & Bridges		No. of works	Amount
			No.of works	Amount	No.of works.	Amount	No.of works	Amount	No.of works	Amount	No.of works	Amount		
1	2	3	4	5	6	7	8	9	10	11	12	13	14	15
1.	Bangalore(R)	9	24	293.50	-	-	17	166.00	41	459.50	18	226.00	59	685.50
2.	Tumkur	13	15	408.06	1	60.00	31	359.50	47	878.01	27	521.00	74	1349.01
3.	Kolar	10	29	314.49	-	-	23	230.00	52	544.49	9	160.00	61	704.49
4.	Hassan	2	1	30.00	-	-	9	98.93	10	128.93	4	91.00	14	219.93
5.	Chitradurga	7	28	240.00	-	-	8	77.00	36	317.00	22	280.00	58	597.00
6.	Davanagere	1	5	60.00	-	-	-	-	5	60.00	1	40.00	6	100.00
7.	Dharwad	4	18	240.04	-	-	-	-	18	240.04	5	160.00	23	400.04
8.	Gadag	5	18	254.00	-	-	4	45.00	22	299.00	5	200.00	27	499.00
9.	Haveri	3	7	139.30	-	-	3	29.00	10	168.30	5	137.00	15	305.30
10.	Belgaum	9	24	392.50	8	109.00	-	-	32	501.50	21	322.00	53	823.50
11.	Bijapur	8	29	410.05	-	-	-	-	29	410.05	15	320.00	44	730.05
12.	Bagalkote	5	11	188.82	-	-	5	32.65	16	221.47	9	200.00	25	421.47
	Total	**76**	**209**	**2900.76**	**9**	**169.00**	**100**	**1038.53**	**318**	**4178.29**	**141**	**2657.00**	**459**	**6835.29**